


ಆ ಪುಟ್ಟ ಹಕ್ಕಿಯನ್ನು ಮರೆತೇ ಬಿಟ್ಟೆ. ನೀನು ಅದನ್ನು ಹೋಗಲು ಬಿಡುವುದೇ ಒಳ್ಳೆಯದೆಂದು ನನಗನ್ನಿಸುತ್ತದೆ' ಎಂದರು. 'ಇಲ್ಲ. ನಾನಿನ್ನು ಮರೆಯುವುದಿಲ್ಲ. ಪಂಜರ ಸ್ವಚ್ಛಗೊಳಿಸಿ, ಅದಕ್ಕೆ ಹೊಸದಾಗಿ ನೀರು ಕೊಡುತ್ತೇನೆ. ಜೋಪಾನವಾಗಿ ನೋಡಿಕೊಳ್ಳುತ್ತೇನೆ' ಎಂದು ಭರವಸೆ ನೀಡಿದ. ವಾಸು ಪಂಜರದೊಳಗೆ ಕೈ ಹಾಕಿ, ಅದನ್ನು ಸ್ವಚ್ಛಗೊಳಿಸಲು ಮುಂದಾದ. ಆಗ ಹೆದರಿದ ಕಾಗೆಯ ಮರಿ, ಕೂಗುತ್ತಾ, ಪಂಜರದೊಳಗೆಲ್ಲಾ ರೆಕ್ಕೆ ಬೀಸುತ್ತಾ ಹಾರಾಡತೊಡಗಿತು. ಹೇಗೋ ಪಂಜರ ಸ್ವಚ್ಛಗೊಳಿಸಿದ ವಾಸು ನೀರು ತರಲು ಹೋದ. ವಾಸು ಪಂಜರದ ಬಾಗಿಲನ್ನು ಹಾಕದೇ ಹೋಗುತ್ತಿರುವುದನ್ನು ಗಮನಿಸಿದ ಅಮ್ಮ, 'ವಾಸು, ಪಂಜರದ ಬಾಗಿಲು ಹಾಕು. ಇಲ್ಲಾದರೆ ನಿನ್ನ ಪುಟ್ಟ ಹಕ್ಕಿ ಹೊರಗೆ ಹಾರಿ ಏನಾದರೂ ತಾಪತ್ರಯ ಮಾಡಿಕೊಳ್ಳುತ್ತದೆ' ಎಂದರು.

ಅಮ್ಮನ ಮಾತು ಮುಗಿಯುವಷ್ಟರಲ್ಲಿಯೇ ಹಕ್ಕಿಯ ಮರಿ ಪಂಜರದ ಬಾಗಿಲಿನಿಂದ ಹೊರಗೆ ಬಂದು, ತನ್ನ ರೆಕ್ಕೆಗಳನ್ನು ಅಗಲಿಸಿ, ಕೊಠಡಿಯಲ್ಲೆಲ್ಲಾ ಹಾರಲಾರಂಭಿಸಿತು! ಹಕ್ಕಿ ತನಗಾಗುತ್ತಿದ್ದ ಸಂತೋಷಕ್ಕೊ ಗಾಬರಿಗೋ ಏನನ್ನೂ ಗಮನಿಸದೆ ಹಾರುತ್ತಾ ಕಿಟಕಿಯ ಗಾಜಿಗೆ ಡಿಕ್ಕಿ ಹೊಡೆದು ಕೆಳಗೆ ಬಿದ್ದುಬಿಟ್ಟಿತು.

ಓಡಿ ಬಂದ ವಾಸು, ಮರಿಯನ್ನು ಎತ್ತಿ, ಮತ್ತೆ ಪಂಜರದೊಳಗೆ ಬಿಟ್ಟ. ಮರಿಯೇನೋ ಜೀವಂತವಾಗಿತ್ತು, ಆದರೆ, ಅದು ಸುಮ್ಮನೆ ಅಲುಗಾಡದೆ, ರೆಕ್ಕೆ ಹರಡಿಕೊಂಡು ಬಿದ್ದುಕೊಂಡಿತ್ತು. ಅದು ಕಷ್ಟಪಟ್ಟು ಉಸಿರಾಡುತ್ತಿದ್ದದನ್ನು ಕಂಡ ವಾಸು ಅಳಲಾರಂಭಿಸಿದ.

'ಅಮ್ಮ, ಈಗ ನಾನೇನು ಮಾಡಲಿ?'

'ಈಗ ನೀನು ಮಾಡಬಹುದಾದದ್ದು ಏನೂ ಇಲ್ಲ' ಎಂದರು ಅಮ್ಮ.

ಇಡೀ ದಿನ ವಾಸು ಕೊಠಡಿ ಬಿಟ್ಟು ಹೋಗಲಿಲ್ಲ. ಮರಿಯನ್ನು ನೋಡುತ್ತಲೇ ಇದ್ದ. ಅದು ಮೊದಲಿನಂತೆಯೇ ಬಿದ್ದುಕೊಂಡಿತ್ತು. ಹಕ್ಕಿ ಚೆನ್ನಾಗಿ ಉಸಿರಾಡುತ್ತಿತ್ತು. ರಾತ್ರಿ, ನಿದ್ದೆ ತಡೆಯದೆ ವಾಸು ಮಲಗಲು ಹೋದ.

ರಾತ್ರಿ ಬಹಳ ಹೊತ್ತು ಅವನಿಗೆ ನಿದ್ದೆ ಬರಲಿಲ್ಲ. ನಿದ್ದೆ ಹತ್ತಿದ ಸ್ವಲ್ಪ ಹೊತ್ತಿನಲ್ಲೇ, ರೆಕ್ಕೆ ಚೆಲ್ಲಿ ಬಿದ್ದುಕೊಂಡು ಉಸಿರಾಡಲು ಕಷ್ಟ ಪಡುತ್ತಿರುವ ಮರಿಯ ಚಿತ್ರವೇ ಆತನ ಕಣ್ಣಮುಂದೆ ಬಂದು ಎಚ್ಚರವಾಗುತ್ತಿತ್ತು.

ಮಾರನೆಯ ದಿನ ಬೆಳಿಗ್ಗೆ ಎದ್ದ ತಕ್ಷಣ ವಾಸು ಪಂಜರದ ಬಳಿಗೆ ಓಡಿದ. ಪಂಜರವೇನೋ ಇತ್ತು; ಆದರೆ ಹಕ್ಕಿ ಇರಲಿಲ್ಲ. ರಾತ್ರಿ ಪಂಜರದ ಬಾಗಿಲು ಹಾಕಲು ವಾಸು ಮರೆತಿದ್ದ. ಬೆಳಗಿನ ಜಾವ ಮರಿ ಹೊರ ಬಂದು, ಬಾಗಿಲು ತೆರೆದಿಟ್ಟಿದ್ದ ಕಿಟಕಿಯ ಮುಖಾಂತರ ಹಾರಿಹೋಗಿತ್ತು!

ಅಮ್ಮನಿಂದ ಈ ವಿಷಯ ತಿಳಿದ ವಾಸುವಿಗೆ, ಹಕ್ಕಿ ಹೋಗಿದ್ದಕ್ಕಾಗಿ ಬೇಸರವೇನೂ ಆಗಲಿಲ್ಲ!

ಮತ್ತೆಂದೂ ವಾಸು ಹಕ್ಕಿ ಹಿಡಿಯಲು ಮನಸ್ಸು ಮಾಡಲಿಲ್ಲ.